‘ಒಕ್ಕಲ ನೆನಪು’ ಕೇಶವರೆಡ್ಡಿ ಹಂದ್ರಾಳರ ಕೃತಿಯೊಂದರ ಶೀರ್ಷಿಕೆಯಷ್ಟೇ ಅಲ್ಲ; ಅದು ಅವರ ಒಟ್ಟಾರೆ ಬರವಣಿಗೆಗೆ ಹೊಂದುವ ರೂಪಕ. ಮಧುಗಿರಿ ತಾಲ್ಲೂಕಿನ ಹಂದ್ರಾಳದ ಅವರು, ಕನ್ನಡದ ಪ್ರಮುಖ ಕಥೆಗಾರರಲ್ಲೊಬ್ಬರು. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪ ಆಯುಕ್ತರಾಗಿ ಕಾರ್ಯ ನಿರ್ವಹಿಸಿ, ಇದೀಗ ನಿವೃತ್ತರು. ಕಥೆ, ಕಾದಂಬರಿ ಸೇರಿದಂತೆ ಸಮೃದ್ಧ ಗದ್ಯದ ಫಸಲು. ‘ನನ್ನ ಕ್ರಾಂತಿಯ ಹುಡುಗಿ’, ‘ಅಂತಃಪುರ’, ‘ಬಾರಕ್ಕ ಬೆಳದಿಂಗಳೆ’, ‘ಮರೆತ ಭಾರತ’, ‘ಅಣು’, ‘ಮೃಗತೃಷ್ಣ’ ಅವರ ಕೆಲವು ಜನಪ್ರಿಯ ಕೃತಿಗಳು.

ಲಿಟರೇಚರ್ ಅಧ್ಯಯನ ಮಾಡುತ್ತಿದ್ದ. ಹದಿನೈದು ದಿನ ಲೇಟಾಗಿ ತರಗತಿಗೆ ಸೇರಿದ ನನಗೆ ಹಾಸ್ಟೆಲ್‌ನಲ್ಲಿ ಈತ ಇದ್ದ ರೂಮನ್ನು ಅಲಾಟ್ ಮಾಡಿದ್ದರು. ನಾನು ಲಗೇಜಿನೊಂದಿಗೆ ರೂಮು ಪ್ರವೇಶಿಸಿದಾಗ ತೆಳ್ಳಗೆ, ಬೆಳ್ಳಗೆ ಇದ್ದ ಯುವಕ ಮಂಚದ ಮೇಲೆ ದಿಂಬಿಗೆ ಒರಗಿ ಏನೋ ಓದುತ್ತಿದ್ದವನು ನಾನು ರೂಮು ಪ್ರವೇಶಿಸಿದ್ದನ್ನು ಗಮನಿಸಿಯೂ ಗಮನಿಸಿದಂತೆ ಇದ್ದ. ನಾನು ನನ್ನ ಮಂಚದ ಮೇಲೆ ಆಶ್ರಯ ಪಡೆದಿದ್ದೆ. ಮಾರನೆಯ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಬಂದಾಗ ‘ಯಾವ ಫ್ಯಾಕಲ್ಟಿ’ ಎಂದು ಅವನೇ ಪ್ರಶ್ನಿಸಿದ್ದ. ‘ಎಕನಾಮಿಕ್ಸ್’ ಎಂದಿದ್ದೆ. ತೆಳುವಾಗಿ ಗಡ್ಡ ಬಿಟ್ಟಿದ್ದವನು ನಗುತ್ತಾ ‘ಬೈ ದಿ ಬೈ ನಾನು ಗೋವಿಂದ ವೆಂಕಟರಮಣ ಹೆಗಡೆ. ಎಂ.ಎ. ಇಂಗ್ಲಿಷ್ ಲಿಟರೇಚರ್ ಸ್ಟೂಡೆಂಟ್. ನನ್ನದು ಮಂಗಳೂರು. ಲಿಟರೇಚರ್ ಫ್ಯಾಕಲ್ಟಿ ಇಲ್ಲಿ ಚೆನ್ನಾಗಿದೆ ಅಂತ ಯಾರೋ ಹೇಳಿದ್ದರಿಂದ ಬಂದು ಸೇರಿಕೊಂಡೆ. ಮತ್ತು ಕ್ಯಾಪಿಟಲ್ ಸಿಟಿಯಲ್ಲಿ ನಾಲೆಡ್ಜ್ ತುಂಬಾ ವಾಸ್ತಾಗಿ ಡೆವಲಪ್ ಆಗುತ್ತೆ ಅನ್ನೋದು ಕೂಡಾ ಸತ್ಯ. ಅಂದ ಹಾಗೆ ನಾನು ಆಗಾಗ ಸಿಗರೇಟು ಸುಡ್ತೀನಿ. ಅಪರೂಪಕ್ಕೆ ಬಿಯರ್ ಕುಡಿತೀನಿ. ಆದ್ರೆ ನಾನ್ ವೆಜ್ ತಿನ್ನಲಿಕ್ಕಿಲ್ಲ. ಇದುವರೆಗೂ ಮೊಟ್ಟೆ ಕೂಡ ಬಾಯಿಗಿಟ್ಟುಕೊಂಡಿಲ್ಲ. ಆದರೆ, ತಿನ್ನೋರನ್ನು ಕಂಡ್ರೆ ಖುಷಿ ಆಗ್ತದೆ. ಡಿಗ್ರಿಯಲ್ಲಿ ಓದುವಾಗ ಮೀನು ಫ್ರೈ ತಿನ್ನಲು ಪ್ರಯತ್ನಿಸಿ ವಾಕರಿಕೆ, ವಾಂತಿ ಎರಡೂ ಆಗಿ ಪ್ರಯತ್ನ ಕೈ ಬಿಟ್ಟೆ’ ಎಂದು ಕೈ ಕುಲುಕಿದ್ದ. ಅವನ ಕೈ ತಣ್ಣಗಿತ್ತು. ‘ನಾನು ನಾನ್ ವೆಜ್ ತಿನ್ತೀನಿ. ಸಿಗರೇಟು, ಬಿಯರ್ ಇದುವರೆಗೆ ಬಾಯಿಗಿಟ್ಟುಕೊಂಡಿಲ್ಲ’ ನಗುತ್ತಾ ಹೇಳಿದ್ದೆ. ಒಂದೇ ವಾರದಲ್ಲಿ ನಾವು ಏಕವಚನದ ಸ್ನೇಹಿತರಾಗಿದ್ದೆವು. ಕ್ಲಾಸುಗಳು ಶುರುವಾಗುವ ತಿಂಗಳು ಮೊದಲೇ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಾಗಿತ್ತು. ದೇಶದ ನಾನಾ ಕಡೆ ಎಮರ್ಜೆನ್ಸಿ ವಿರೋಧಿ ಚಳವಳಿಗಳು ಪ್ರಾರಂಭವಾಗಿದ್ದವು. ಹೆಗಡೆ ಕ್ಲಾಸು ಮುಗಿಸಿಕೊಂಡು ಒಮ್ಮೊಮ್ಮೆ ಸಿಟಿಗೆ ಹೋದರೆ ಊಟದ ಟೈಮಿಗೆ ಹಾಸ್ಟೆಲಿಗೆ ಬರುತ್ತಿದ್ದ. ಬರುವಾಗ The week, Today, Illustrated weekly of India ಮುಂತಾದ ಆಂಗ್ಲ ಪತ್ರಿಕೆಗಳನ್ನು ತರುತ್ತಿದ್ದ. ಕಾರ್ಲ್ ಮಾರ್ಕ್ಸ್, ಫಿಡೆಲ್ ಕ್ಯಾಸ್ಟ್ರೊ, ಭಗತ್ ಸಿಂಗ್ ಮುಂತಾದವರ ಬಗ್ಗೆ ಪುಸ್ತಕಗಳ ಸಂಗ್ರಹ ಕೂಡ ಅವನ ಬಳಿ ಇತ್ತು. ರಾತ್ರಿ ಬಹಳ ಹೊತ್ತಿನವರೆಗೂ ಓದುತ್ತಿದ್ದ. ನನ್ನ ಬಳಿ ಬಿಟ್ಟರೆ ಹಾಸ್ಟೆಲಿನಲ್ಲಿ ಬೇರೆ ಯಾರೊಂದಿಗೂ ಅಷ್ಟಾಗಿ ಬೆರೆಯುತ್ತಿರಲಿಲ್ಲ. ಮಿಡ್ ಟರ್ಮ್ ರಜೆಗೆ ಹತ್ತು ದಿನ ನಾನು ಊರಿಗೆ ಹೋಗಿದ್ದೆ. ಆದರೆ, ಹೆಗಡೆ ಊರಿಗೆ ಹೋಗದೆ ಬೆಂಗಳೂರಿನಲ್ಲೇ ಇದ್ದು ಎಮರ್ಜೆನ್ಸಿ ವಿರೋಧಿ ಮೀಟಿಂಗುಗಳಲ್ಲಿ ಭಾಗವಹಿಸಿದ್ದನಂತೆ. ನಾನು ರಜ ಮುಗಿಸಿ ವಾಪಸ್ಸು ಬರುವಷ್ಟರಲ್ಲಿ ಅವನ ಮಾತಿನ ವರಸೆ ಬದಲಾಗಿತ್ತು. ‘ಫ್ರಾನ್ಸ್ ಮತ್ತು ರಷ್ಯಾಗಳಲ್ಲಿ ಆದಂತೆ ನಮ್ಮ ದೇಶದಲ್ಲೂ ಕ್ರಾಂತಿ ಆಗ್ಬೇಕು. ಮನುಷ್ಯರನ್ನು ಪ್ರಾಣಿಗಳಿಗಿಂತಲೂ ಅದ್ವಾನವಾಗಿ ನೋಡಲಾಗುತ್ತಿದೆ. ಎಲ್ಲೆಲ್ಲೂ ದರ್ಪ, ದಬ್ಬಾಳಿಕೆ ವಿಜೃಂಭಿಸತೊಡಗಿದೆ. ಆಳುವವರು ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದಾರೆ. ಪ್ರಶ್ನೆ ಮಾಡುವ ಸ್ವಾತಂತ್ರ್ಯವೇ ಇಲ್ಲದ ಮೇಲೆ ಪ್ರಜೆಗಳು ಪ್ರಾಣಿ ಸಮಾನರೇ ಸರಿ. ನನಗೂ ನಕ್ಸಲ್ ಚಳವಳಿಗೆ ಧುಮುಕಬೇಕು ಅನ್ನಿಸುತ್ತಿದೆ. ಆ ಗದ್ದರ್ ಹೇಳ್ತಾನಲ್ಲ, ಹಿಂಸೆಗೆ ಪ್ರತಿಹಿಂಸೆಯೇ ಉತ್ತರ ಅಂತ. ನಿಜ, ಎಲ್ಲಿ ಅಹಿಂಸೆ ಫೇಲ್ ಆಗುತ್ತೋ ಅಲ್ಲೇ ಹಿಂಸೆ ಹುಟ್ಟಿಕೊಳ್ಳೋದು’ ನಾನು ರಜೆಯಿಂದ ಮರಳಿದ ಮೊದಲ ರಾತ್ರಿ ಅವನ ಬಾಯಿಂದ ಹೊರಬಿದ್ದ ಈ ಮಾತುಗಳು ಅವನಲ್ಲಿನ ಬದಲಾವಣೆಯ ಮಾರ್ಗಸೂಚಿಯಂತಿದ್ದವು. ‘ನಿನ್ನ ಮಾತು ನಿಜ, ಒಟ್ಟಾರೆ ವ್ಯವಸ್ಥೆಯೇ ತನ್ನ ಅಡಿಪಾಯವನ್ನು ಅಪಾಯಕ್ಕೆ ಒಡ್ಡಿಕೊಂಡಂತೆ ಅನ್ನಿಸುತ್ತಿದೆ. ಈ ಎಮರ್ಜೆನ್ಸಿ ಭಾರತದ